8002 – B02 – IISA – A – 13

SECOND SEMESTER B.A. DEGREE EXAMINATION, APRIL 2013
M.I.L. KANNADA (New Syllabus)

Time : 3 Hours] [Max. Marks : 80

ಸೂಚನೆ: ಭಾಷೆ ಹಾಗೂ ಬರಹ ಶುದ್ಧಿಗೆ ಗಮನ ಕೊಡಲಾಗುವುದು.

1. ಅ) ಬೇಟೆಗಾರರಾಗಿ ಕಾಡಿಗೆ ಹೋದ ಕುವೆಂಪು ಹಾಗೂ ಅವರ ಸ್ನೇಹಿತರು ಕಬ್ಬಿಗರಾಗಿ ಮನೆ ತೆರಳಿದ ಪ್ರಸಂಗವನ್ನು ವಿವರಿಸಿರಿ.

K.A.S. ARTS COLLEGE & M.C.A. INST. LIBRARY HUBLI

ಅಥವಾ

ಹಾ. ಮಾ. ನಾಯಕರು ಸಾಹಿತ್ಯವನ್ನು ಅರ್ಥೈಸಿದ ವಿಧಾನವನ್ನು ಚರ್ಚಿಸಿರಿ. 12

ಬ) ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ :

1) ಬೆಂಗಳೂರು ನಗರ ಎಂಬ ಒಂದು ಹಳ್ಳಿ

2) ನೆಗಡಿ

3) ಚಟದ ಪರಿಣಾಮಗಳು

4) ಗಾದೆಗಳಲ್ಲಿ ನಾಯಿ. 12

2. ಅ) ಜಬೇದಾಬಾಯಿ ಕಷ್ಟ-ಕಾರ್ಪಣ್ಯಗಳ ನಡುವೆಯೂ ರಂಗಕೋಗಿಲೆಯಾಗಿ ಬೆಳೆದು ಬಂದ ಬಗೆಯನ್ನು ವಿವರಿಸಿರಿ.

ಅಥವಾ

ಕನ್ನಡ ನಾಡು-ನುಡಿಗಾಗಿ ಅನನ್ಯ ಹೋರಾಟ ಮಾಡಿದ ಪಾಟೀಲ ಪುಟ್ಟಪ್ಪನವರ ಸಾಧನೆಗಳನ್ನು ವಿವರಿಸಿರಿ. 12

ಬ) ಬೇಕಾದ **ಎರಡಕ್ಕೆ** ಟಿಪ್ಪಣಿ ಬರೆಯಿರಿ :

1) ಡಾ. ಸ. ಜ. ನಾಗಲೋಟಿಮಠರ ಸಾಧನೆಗಳು

2) ನಾಟ್ಯಭೂಷಣ ಏಣಗಿ ಬಾಳಪ್ಪ

3) ಪಂಡಿತ ಪುಟ್ಟರಾಜ ಗವಾಯಿಗಳು

4) ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ ಚಿತ್ರಕಲೆ. 12

[P.T.O.

3. ಬೇಕಾದ **ಮೂರಕ್ಕೆ** ಸಂದರ್ಭದೊಡನೆ ಸ್ಪಷ್ಟೀಕರಿಸಿ :

1) ''ಮೂಗಿರುವ ತನಕ ನೆಗಡಿ ತಪ್ಪುವ ಹಾಗಿಲ್ಲ!''

2) ''ನಾಯಕನಿಗೆ ಒಂದು ಹರದಾರಿ. ನಾಯಿಗೆ ಮೂರು ಹರದಾರಿ!''

3) ವಿಷವನ್ನು ನಿರ್ಮೂಲನ ಮಾಡಲು ಇನ್ನೊಂದು ವಿಷವೇ ಮದ್ದಾಗುತ್ತದೆ.

4) ಹೃದಯ ಖಾಲಿಯಾಗುವವರೆಗೂ ಅತ್ತರು.

5) ಪ್ರತಿಭಾವಂತ ನಟನೊಬ್ಬನ ಬರುವಿಕೆಯನ್ನು ಸ್ಪಷ್ಟವಾಗಿ ಸೂಚಿಸಿತು.

6) ''ಹಡೆದವ್ವ ನಾನು ಲೋಕದ ಬಂಧನ ಕಿತ್ತು ಹಾಕಿರುವೆ.''

18

4. **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ :

1) ಕುವೆಂಪುರವರ ತಾಯಿಯ ಹೆಸರೇನು ?

2) ತೀ. ನಂ. ಶ್ರೀ. ಅವರ ಪೂರ್ಣ ಹೆಸರೇನು ?

3) ಸಿಂಪಿ ಲಿಂಗಣ್ಣನವರ ಜನ್ಮಸ್ಥಳ ಯಾವುದು ?

4) ಹಾ. ಮಾ. ನಾಯಕರು ಯಾವ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು ?

5) ಬಿ. ಜಿ. ಎಲ್. ಸ್ವಾಮಿಯವರ ತಂದೆಯ ಹೆಸರೇನು ?

6) ಗಾದೆಗಳಲ್ಲಿ ನಾಯಿ ಪ್ರಬಂಧದ ಲೇಖಕರು ಯಾರು ?

7) ಬೆಂಗಳೂರು ನಗರ ಎಂಬ ಒಂದು ಹಳ್ಳಿ ಪ್ರಬಂಧದ ಲೇಖಕರು ಯಾರು ?

8) 'ರಂಗ ಕೋಗಿಲೆ' ಜುಬೇದಾಬಾಯಿ ಮರಣಹೊಂದಿದ್ದು ಯಾವಾಗ ?

9) ಪಾಟೀಲ ಪುಟ್ಟಪ್ಪನವರ ತಂದೆ-ತಾಯಿಯರ ಹೆಸರೇನು ?

10) ಡಾ. ಸ. ಜ. ನಾಗಲೋಟಿಮಠರವರು ಭಾರತದಲ್ಲಿ ಸಂಶೋಧನೆ ಮಾಡಿದ ರೋಗ ಯಾವುದು ?

11) ನಾಟ್ಯಭೂಷಣ ಏಣಗಿ ಬಾಳಪ್ಪನವರ ನಾಟ್ಯಗುರು ಯಾರು ?

12) ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು ಜೀವನ ಚರಿತ್ರೆಯ ಲೇಖಕರು ಯಾರು ?

13) ಜಾನುವಾರು ಸಂತೆ ಕತೆಯನ್ನು ರಚಿಸಿದವರು ಯಾರು ?

14) ''ನಡೆದಾಡುವ ದೇವರು'' ಎಂದು ಯಾರನ್ನು ಕರೆಯುತ್ತಾರೆ ?

14